ಈ ತರಹದ ಏರ್ಪಾಟಿರುವುದರಿಂದ ಮುಂದೆ ಇಂತಹ ಯಾವುದಾದರೂ ಲೋಪ-ದೋಷಗಳಿಗೆ ಅವಕಾಶ ವಿರುವುದಿಲ್ಲವೆನ್ನುವ ಭರವಸೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ಕೊಡಲಿಚ್ಛಿಸುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ :- ಈ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿ ಸರ್ಕಾರ ಪಡೆದುಕೊಳ್ಳುವ ಪ್ರಯೋಜನವೇನಿದೆ, ಅದನ್ನು ಪೂರ್ತಿ ಪಡೆದುಕೊಳ್ಳಬೇಕು. ಕೈಗಾರಿಕಾ ಘಟಕಗಳನ್ನು ಪ್ರಾರಂಭಿಸಿ ನಷ್ಟವಾಯಿತೆಂದು ಮಧ್ಯದಲ್ಲೆ ಮುಚ್ಚಲ್ಪಟ್ಟರೆ ಅಂತಹವರ ಬಗ್ಗೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಪುನಃ ಅವರು ಸರ್ಕಾರದಿಂದ ಏನಾದರೂ ಸೌಲಭ್ಯ ಪಡೆಯುವ ವ್ಯವಸ್ಥೆ ಇದೆಯೇ?

ಶ್ರೀ ಬಿ. ಎ. ಮೊಹಿದ್ದೀನ್ :- ರಾಜ್ಯದಲ್ಲಿ ನೀವೇ ಮಾಡಿರುವಂಥ ಕಾನೂನುಗಳಿರುವುದರಿಂದ ಕಾನೂನಿನ ಪ್ರಕಾರ ಹಣ ಮರುಪಾವತಿ ಮಾಡಬೇಕಾಗುತ್ತದೆ.

ವಿಷಯ :- ಚಿಕ್ಕನಾಯಕನಹಳ್ಳಿಯಲ್ಲಿ ಸ್ವಯಂ ಉದ್ಯೋಗ ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 220 (1632)

ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) :- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕನಾಯಕನಹಳ್ಳಿ ಚುನಾವಣಾ ಕ್ಷೇತ್ರದಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಪ್ರತಿ ಸಾಲಿನಲ್ಲಿ ಎಷ್ಟು ಜನ ನಿರುದ್ಯೋಗಿಗಳಿಗೆ ಸಾಲ ಕೊಡಲಾಗಿದೆ?

ಆ) ಇದರಲ್ಲಿ ಎಷ್ಟು ಜನ ಉದ್ಯೋಗ ಮಾಡುತ್ತಿರುವರು?

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :-

ಅ) ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆ ಅಡಿಯಲ್ಲಿ ಚಿಕ್ಕನಾಯಕನಹಳ್ಳಿ ಚುನಾವಣಾ ಕ್ಷೇತ್ರದಲ್ಲಿ 89 ಜನವರಿಗೆ ಸ್ವಂತ ಉದ್ಯೋಗ ಮಾಡಲು ಈ ಕೆಳಗಿನಂತೆ ಸಾಲ ಮಂಜೂರು ಮಾಡಲಾಗಿದೆ.

93-94	94-95	95-96	ಒಟ್ಟು
3	47	36	86

ಆ) ಈ 86 ಫಲಾನುಭವಿಗಳಲ್ಲಿ ಎಲ್ಲರೂ ಉತ್ಪಾದನೆ ಸೇವಾ ಘಟಕ ಗಳನ್ನು ಸ್ಥಾಪಿಸಿರುತ್ತಾರೆ. ಈ ಯೋಜನೆಯಡಿ ಪ್ರಾರಂಭವಾದ ಘಟಕಗಳಲ್ಲಿ ಒಟ್ಟು 172 ಜನರು ಉದ್ಯೋಗ ಮಾಡುತ್ತಿದ್ದಾರೆ. ವಿವರಗಳು ಈ ಕೆಳಕಂಡಂತಿವೆ.

93-94	94-95	95-96	ಒಟ್ಟು
6	94	72	172

ಶ್ರೀ ಎನ್. ಬಸವಯ್ಯ :– ಪುನಃ ಏನಾದರೂ ವ್ಯವಸ್ಥೆ ಮಾಡಿ ದುಡಿಯುವ ಬಂಡವಾಳವನ್ನು ಒದಗಿಸುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತಿರೋ?

ಶ್ರೀ ಬಿ. ಎ. ಮೊಹಿದ್ದೀನ್ :– ಮಾನ್ಯ ಅಧ್ಯಕ್ಷರೆ, ದುಡಿಯುವ ಬಂಡವಾಳ ಒದಗಿಸುವುದು ಬ್ಯಾಂಕಿನವರ ಕೈಯಲ್ಲಿದೆ. ಉತ್ಪಾದನಾ ಸೇವಾ ಘಟಕ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ, ಮತ್ತು ಅದರ ಅವಶ್ಯಕತೆಯೇನಿದೆ ಎಂಬುದನ್ನು ನೋಡಿಕೊಂಡು ದುಡಿಯುವ ಬಂಡವಾಳವನ್ನು ಒದಗಿಸಲಾಗುತ್ತದೆ. ಆದರೆ, ಪ್ರಧಾನಮಂತ್ರಿಗಳ ರೋಜಗಾರ ಯೋಜನೆಯಡಿ ಬಂಡವಾಳವನ್ನು ಒದಗಿಸುವ ಬಗ್ಗೆ ಯೋಜನೆ ಆಳವಡಿಸಿ ಕೊಂಡು, ಮುಂದೆ ಅವರು ಏನು ಎಕ್ಸ್‌ಪ್ಯಾನ್‌ಶನ್ ಮಾಡುತ್ತಾರೆ, ಈಗ ಕುಮಟಾದಲ್ಲಿ ಒಬ್ಬರು ಒಂದು ಲಕ್ಷ ರೂಪಾಯಿ ಸಾಲ ತೆಗೆದುಕೊಂಡು ಸುಮಾರು 10-15 ಲಕ್ಷ ರೂಪಾಯಿಗಳ ಒಂದು ಘಟಕ ಪ್ರಾರಂಭಿಸಿದ್ದಾರೆ. ಅದು ಬೇರೆ ರೀತಿಯದ್ದಾಗುತ್ತದ್ದಾತ್ತದಾದ್ದರಿಂದ ಎಕ್ಸ್‌ಪ್ಯಾನ್‌ಶನ್‌ಗೂ ಸಾಲ ಕೊಡುತ್ತೇವೆ. ಆದುದರಿಂದ, ತಾವು ಕೇಳಿರುವಂತೆ ಇಷ್ಟಕ್ಕೆ ಮಾತ್ರ ದುಡಿಯುವು ಬಂಡವಾಳವನ್ನು ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್. ಬಸವಯ್ಯ :– ಅಂದಾಜು ಮಾಡಿ ಸಾಲ ಕೊಟ್ಟಿರುತ್ತಾರೆ, ಆದರೆ, ಸಾಲ ಸಾಕಾಗುವುದಿಲ್ಲವಾದ್ದರಿಂದ ಇವೊತ್ತು ಅವುಗಳನ್ನು ಬಾಗಿಲು ಹಾಕುವ ಸ್ಥಿತಿಗೆ ಬಂದಿದೆ. ಅಂತಹ ಯೋಜನೆಗಳನ್ನು ತಾವು ಪುನಃ ಪರಿಶೀಲನೆ ಮಾಡಿ ಸಾಲ ಕೊಟ್ಟರೆ ಆ ಯೋಜನೆಯಿಂದ ಪ್ರಯೋಜನ ಪಡೆಯತಕ್ಕಂಥ ಅವಕಾಶವುಂಟಾಗಬಹುದು. ಆದುದರಿಂದ, ದಯಮಾಡಿ ಪುನರ್ ಪರಿಶೀಲಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಎ. ಮೊಹಿದ್ದೀನ್ :– ಆದನ್ನು ಪರಿಶೀಲಿಸೋಣ. ಆದರ ಜೊತೆಗೆ ತಾವೂ ಕೂಡ ಅಲ್ಲಿ ಇರುವುದರಿಂದ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಲೀಡ್ ಬ್ಯಾಂಕ್ ಮತ್ತು ಪಿ.ಎಲ್.ಡಿ. ಬ್ಯಾಂಕನ್ನು ಮಾನಿಟರ್ ಮಾಡುವಂಥಾದ್ದು ಇದೆ. ನಿಮ್ಮ ಜಿಲ್ಲೆಯ ನಿಮ್ಮ ತಾಲ್ಲೂಕಿನಲ್ಲಿರುವ ಎಲ್ಲಾ ಫಲಾನುಭವಿಗಳಿಗೂ ನಾವು ಹಣ ಸೌಲಭ್ಯ ಒದಗಿಸಿದ್ದೇವೆ. ಇದರ ಪ್ರಗತಿ ಬೇಕಾದರೆ ತಮಗೆ ಒದಗಿಸಿಕೊಡುತ್ತೇನೆ.

ವಿಷಯ :– ಸಿಂದಗಿ ನಗರದ ಕುಡಿಯುವ ನೀರಿನ ಸಮಸ್ಯೆಗೆ– ಶಾಶ್ವತ ಪರಿಹಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 221 (1076)

ಶ್ರೀ ಬಸವನ ಗೌಡ ರಾ. ಪಾಟೀಲ (ಬಿಜಾಪುರ) :– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?